ತಾರೀಖು 10ನೆ ಸೆಪ್ಟಂಬರ್ 1903.

ನಂ. ರೆ. 877, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟು ಹಗ್ಗಡದೇವನ ಕೋಟೆ ತಾಲ್ಲೂಕಿನ ಅಮಲ್ದಾರ್‌ರಾದ ಮೆ|| ಮಹಮದ್ ಖಬೀದುಲ್ಲಾಯವರಿಗೆ 1903ನೆ ಜುಲೈ 26ನೆ ತಾರೀಖಿನಾರಭ್ಯ 20 ದಿನೆಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು. ತಾಲ್ಲೂಕಿನ ಷಿರಿಸ್ತೆದಾರ್ರು, ಸದರೀ ಅಮಲ್ದಾರ್ರು ರಜಾದಲ್ಲಿದ್ದ ಕಾಲದಲ್ಲಿ ಸದರೀ ತಾಲ್ಲೂಕಿನ ಚಾರ್ಜ್ಜನಲ್ಲಿದ್ದರು.

ತಾಲ್ಲೂಕು 11ನೆ ಸೆಪ್ಟಂಬರ್ 1903.

ನಂ. ರೆ. 885—ರೆ. ಫೈ. 25–1901, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೆ ಆರ್ಟಿಕಲ್ ಅನುಸರಿಸಿ ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಿಕನಹಳ್ಳಿ ತಾಲ್ಲೂಕಿನ ಅಮಲ್ದಾರ್‌ರಾದ ಮೆ|| ಎಂ. ಪಿ. ವಿಶ್ವನಾಥರಾಯರಿಗೆ 1903ನೆ ಮೇ 29ನೆ ತಾರೀಖಿನಿಂ ರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

2. ತಾಲ್ಲೂಕಿನ ಷಿರಿಸ್ತೆದಾರ್ರು ಸದರೀ ಅಮಲ್ದಾರ್ರು ರಜಾದಲ್ಲಿದ್ದ ಕಾಲದಲ್ಲಿ ಸದರೀ ತಾಲ್ಲೂಕಿನ ಚಾರ್ಜ್ಜನಲ್ಲಿದ್ದರು.

ತಾರೀಖು 11ನೆ ಸೆಪ್ಟಂಬರ್ 1903.

ನಂ. ರೆ. 888, ಅಮಲ್ದಾರ್ರುಗಳ ಇದರಡೀ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

1. ಮೆ|| ಟಿ. ಧರ್ಮರಾಜ ಚೆಟ್ಟಿಯವರು ಮಂಡ್ಯದಿಂದ ದೇವನಹಳ್ಳಿ ತಾಲ್ಲೂಕಿಗೆ.

2. ಮೆ|| ಇ. ಸಿ. ಸದಾಶಿವಂ ಪಿಳ್ಳೈಯವರು ದೇವನಹಳ್ಳಿಯಿಂದ ಕಡೂರು ತಾಲ್ಲೂಕಿಗೆ.

ತಾರೀಖು 12ನೆ ಸೆಪ್ಟಂಬರ್ 1903.

ನಂ. 248—ಎಕ್ಸೈ. ಫೈ. 4–97, ಸ್ರ 1901ನೆ ಇಸವಿಯ Vನೆ ನಂಬರ್ ಎಕ್ಸೈಜ್ ರೆಗ್ಯುಲೇಷ್ಯ 4ನೆ ಸೆಕ್ಷನ್‌ನಿನ ಕ್ಲಾಜ್ (b) ಅನುಸರಿಸಿ ಮತ್ತು ಈ ವಿಷಯವಾಗಿ ತಮಗೆ ಇರುವ ಇತರ ಎಲ್ಲಾ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮರ್ ಮಹಾರಾಜಾ ಸರ್ಕಾರದವರು, ಶಿಂಗೇರಿ ಜಹಗೀರಿನ ತತ್ಕಾಲದ ಏಜಂಟರನ್ನು ಎಕ್ಸೈಜ್ ಕಮಿಷನರವರ ಮೇಲ್ವಿಚಾರಣೆಗೆ ಒಳಪಟ್ಟು ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರ ಏಕಮತ್ಯದೊಡನೆ ಜಹಗೀರಿನ ಸರಹದ್ದಿನೊಳಗೆ ಮೇಲ್ಕಂಡ ರೆಗ್ಯುಲೇಷನಿನ 13, 15, 20, 25, ಮ 26ನೆ ಸೆಕ್ಷನ್‌ಗಳಿನುಸರಿಸಿ ಡೆಪ್ಯುಟಿ ಕಮಿಷನರವರ ಎಲ್ಲಾ ಅಧಿಕಾರಗಳನ್ನು ಚಲಾಯಿಸುವ ಬಗ್ಗೆ ವೊಕರರ್ ಮಾಡಿರುತ್ತಾರೆ.

ತಾರೀಖು 14ನೆ ಸೆಪ್ಟಂಬರ್ 1903.

ನಂ. 256—ಎಕ್ಸೈ. ಫೈ. 5–97, ಎಕ್ಸೈಜ್ ಕಮಿಷನರವರ ಆಫೀಸಿಗೆ ಸೇರಿದ ಎಕ್ಸಸ್ಟೈ ಅಸಿಸ್ಟೆಂಟ್ ಕಮಿಷನರಾದ ಮೆ|| ಎಸ್. ವೆಂಕಟರಂಗಯ್ಯಂಗಾರ್ಯಿಗೆ ಅವರು ತಮ್ಮ ಕೆಲಸಗಳ ಚಾರ್ಜ್ಜನ್ನು ವಪ್ಪಿಸುವ ತಾರೀಖಿನಾರಭ್ಯ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. 1903ನೆ ಆಗಸ್ಟ್ 13ನೆ ಮಾರ್ಕ್ಕಂ 137–8—ಎಕ್ಸೈ. ಫೈ. 5—97ನೆ ನಂಬರ್ ಗವರ್ನ್‌ಮೆಂಟಿನ ಆರ್ಡರ್‌ನಲ್ಲಿ ಹುಕುಂ ಮಾಡಲ್ಪಟ್ಟಿದ್ದ ಅವರು ಕೆಲಸದಿಂದ ನಿವೃತ್ತರಾಗೋಣವು ಸದರೀ ರಜಾ ಪೂರೈಸದನಂತರ ಜಾರೀಲಿ ಬರತಕ್ಕದ್ದು.

ತಾರೀಖು 15ನೆ ಸೆಪ್ಟಂಬರ್ 1903.

ನಂ. ರೆ. 911, ಸ್ರ 1903ನೆ ಸೆಪ್ಟಂಬರ್ 7ನೆ ಮಾರ್ಕ್ಕಂ ರೆ. 852ನೆ ನಂಬರ್ ಇಸ್ತಿಹಾರ್ನ್ನಿಯ ಬದಲಾವಣೆಯಲ್ಲಿ ಇದರಡೀ ಕಂಡ ಅಮಲ್ದಾರ್ರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

ಮೆ|| ಸಿ. ನರಸಿಂಗರಾಯರು, ಬೇಲೂರು ತಾಲ್ಲೂಕಿನಿಂದ ವೊಳಕಾಲ್ಮುರು ತಾಲ್ಲೂಕಿಗೆ.

ಮೆ|| ಬಿ. ಎಸ್. ವೆಂಕಟೇಶಯ್ಯನವರು, ವೊಳಕಾಲ್ಮುರು ತಾಲ್ಲೂಕಿನಿಂದ ದಾವಣಗೆರೆ ತಾಲ್ಲೂಕಿಗೆ.

ಮೆ|| ಟಿ. ಕೆ. ಲಕ್ಷ್ಮಣ ಅಯ್ಯರ್‌ಯವರು, ಶಿವವೊಗ್ಗಾ ತಾಲ್ಲೂಕಿನಿಂದ ಅರಸೀಕೆರೆ ತಾಲ್ಲೂಕಿಗೆ.

ಹುಕುಂ ಬವೋಜೇಬ್,

ಹೆಚ್. ವಿ. ನಂಜುಂಡೈಯ್ಯ,

ಜನರಲ್ ಮ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಟೆರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನ್ನಿ ಮಾ.

ತಾರೀಖು 11ನೆ ಸೆಪ್ಟಂಬರ್ 1903.

ನಂ. 1022–5031, ಮಾರೀಕಣಿವೆ ಕೆಲಸಗಳ ಚಾರ್ಜ್ಜನಲ್ಲಿರುವ ಹಂಗಾಮಿ ಧರ್ಜಿಯ ಸೂಪರ್‌ಟೆಂಡಿಂಗ್ ಇಂಜಿನಿಯರಾದ ಮೆ|| ಸಿ. ಟಿ. ದಳಾಲ್ ಯವರು 1903ನೆ ಸೆಪ್ಟಂಬರ್ ಗುರ್ರೆ ತಾರೀಖಿನಾರಭ್ಯ ಸೂಪರ್‌ನ್ಯೂಮರೆರಿ ಸೂಪರ್‌ಟೆಂಡಿಂಗ್ ಇಂಜಿನಿಯರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 12ನೆ ಸೆಪ್ಟಂಬರ್ 1903.

ನಂ. 1027–5077, ಶಿವವೊಗ್ಗಾ ಡಿವೀಜನಿನ ಆಫೀಷಿಯೇಟಿಂಗ್ ಎಕ್ಸಿಕ್ಯೂಟಿವ್ ಇಂಜಿನಿಯರಾದ ಮೆ|| ಕೆ. ಪ್ರಹ್ಲಾದ ರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 2 ತಿಂಗಳು 21 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಮೈಸೂರು ಡಿವೀಜನಿಗೆ ಸೇರಿದ ಅಸಿಸ್ಟೆಂಟ್ ಇಂಜಿನಿಯರ್ ಮೆ|| ಕೆ. ಕೃಷ್ಣಯ್ಯಂಗಾರ್ರು ಆಫೀಷಿಯೇಟಿಂಗ್ ಎಗಿಕ್ಯೂಟಿವ್ ಇಂಜಿನಿಯರಾಗಿ ವೊಕರರ್ ಮಾಡಲ್ಪಟ್ಟು, ಮೆ|| ಪ್ರಹ್ಲಾದ ರಾಯರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಶಿವವೊಗ್ಗಾ ಡಿವೀಜನಿನ ಚಾರ್ಜ್ಜಗೋಸ್ಕರ ನೇಮಿಸಲ್ಪಟ್ಟಿರುತ್ತಾರೆ.

ಹುಕುಂ ಬವೋಜೇಬ್,

ಡಬ್ಲ್ಯೂ. ಮೆಕ್ ಹಟೇ,

ಪಬ್ಲಿಕ್ ವರ್ಕ್ಸ್ ಇಲಾಖೆಯ ಮೈಸೂರ ಗವರ್ನ್‌ಮೆಂಟ್ ಸೆಕ್ರಟೆರಿ.